ಶ್ರೀ ಸಿ. ಅಪ್ಪಾಜಿ.—ಸ್ವಾಮಿ ನನ್ನ (ಇ) ಪ್ರಶ್ನೆಗೆ ಉತ್ತರವಾಗಿ ನಿವೇಶನರಹಿತರಿಗೆ ಆರು ತಿಂಗಳೊಳಗಾಗಿ ಅಥವಾ ತಡೆಯಾಜ್ಞೆಯನ್ನು ತೆರವು ಮಾಡಿದ ಕೂಡಲೇ ನಿವೇಶನಗಳನ್ನು ಒದಗಿಸಿ ಕೊಡುತ್ತೇವೆ ಎಂದು ಹೇಳಿದ್ದೀರಿ. ಆದ್ದರಿಂದ ಎಷ್ಟು ಜನ ಬೆನಿಫಿಷರೀಸ್‌ಗೆ ತೊಂದರೆಯಾಗುತ್ತದೆ ಎಂಬುದನ್ನು ತಿಳಿಸುತ್ತೀರಾ?

ಶ್ರೀ ಧವ ರ್‌ಸಿಂಗ್.—ಒಟ್ಟು ೫೦ ಲ್ಯಾಂಡ್ ಆಕ್ವಿಜಿಷನ್ ಕೇಸುಗಳಿಗೆ ತಡೆಯಾಜ್ಞೆ ಬಂದಿದೆ. ೫೧೭ ಜನಗಳಿಗೆ ಇನ್ನು ಉಚಿತವಾಗಿ ನಿವೇಶನಗಳನ್ನು ಹಂಚಬೇಕಾಗಿದೆ. ಆ ಸೈಟುಗಳಿಗೆ ಸಂಬಂಧಪಟ್ಟ ಜಮೀನು ೨ ಸಾವಿರ ಎಕರೆ ಇದೆ.

ಶ್ರೀ ಸಿ. ಅಪ್ಪಾಜಿ.—ನಿವೇಶನಗಳನ್ನು ಇನ್ನು ಪಡೆಯಬೇಕಾಗಿರುವವರ ಸಂಖ್ಯೆ ಎಷ್ಟು?

ಶ್ರೀ ಧರ್ಮಸಿಂಗ್.—೧೨೯೩೮ ಜನಗಳು. ಈಗ ತಡೆಯಾಜ್ಞೆಯನ್ನು ತೆಗೆದು ಹಾಕಿದರೆ ೨ ಸಾವಿರ ಜನಗಳಿಗೆ ನಿವೇಶನಗಳನ್ನು ಕೊಡಬಹುದು.

ಶ್ರೀ ಸಿ. ಅಪ್ಪಾಜಿ.—ಹೊಸದಾಗಿ ಗುರುತಿಸಲಾದ ನಿವೇಶನರಹಿತರು ೨೬೫೯ ಜನ ಎಂದು ಕೊಟ್ಟಿದ್ದೀರಿ. ನನಗೆ ಗೊತ್ತಿರುವ ಹಾಗೆ ಇನ್‌ಟೆನ್ಸಿವ್ ಸರ್ವೆ ಮಾಡಿಲ್ಲ. ಹಳ್ಳಿಗಳಲ್ಲಿರತಕ್ಕ ರೈತರು ಯಾರು ಬಿ.ಡಿ.ಎಗೆ ಅರ್ಜಿ ಹಾಕಿದ್ದಾರೆ ಅಷ್ಟು ಮಾತ್ರ ಸೇರಿಸಿಕೊಂಡಿದ್ದಾರೆ. ಆದ್ದರಿಂದ ಪ್ರತಿಹಳ್ಳಿಯಲ್ಲಿಯೂ ಇನ್‌ಟೆನ್ಸಿವ್ ಸರ್ವೆ ಮಾಡಿಸಿ ಕಾನೂನಿನ ವ್ಯಾಪ್ತಿಯಲ್ಲಿ ನಿವೇಶನ ರಹಿತರು ಎಷ್ಟು ಜನ ಬರುತ್ತಾರೆ ಎಂಬುದನ್ನು ಗುರುತಿಸಿ ಅವರೆಲ್ಲರಿಗೂ ನಿವೇಶನಗಳನ್ನು ಹಂಚುವ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಧರ್ಮಸಿಂಗ್.—೧೯೮೨-೮೩ನೇ ಸಾಲಿನಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ನಿವೇಶನರಹಿತರನ್ನು ಗುರುತಿಸಲು ಇನ್‌ಟೆನ್ಸಿವ್ ಸರ್ವೆ ಮಾಡಬೇಕೆಂದು ನಾವು ಆಜ್ಞೆ ನೂಡಿದ್ದೇವೆ.

Scarcity of drinking water in Hassan Constituency.

440. K. H. HANUME GOWDA (Hassan).—Will the Minister for Rural Development and Panchayat Raj be pleased to state:—

a) whether it has come to the notice of the Government that hardship is being experienced for drinking water in Kausika Chikkbasavanahalli of Shanthigrama hobli, Kattaya Village of Kattaya hobli, Channapatna, Uddur and Doddakondagola of Kasaba hobli of Hassan Constituency;

(b) if so, whether plans and estimates have been prepared for Water Supply Schemes for these Villages;

(c) when the Government would initiate action for implementing the said schemes?

SRI B. RAMAIAH (Minister for Rural Development and Panchayat Raj.—

(a) Bore-wells have been dug in all the villages mentioned in the question. But, the borewell dug in Uddur did not yield sufficient quantity of water and hence, action would be taken to dig a third bore-well. Bore-wells in the remaining villages have been successful and hand pumps have also been installed. Hence, there is no difficulty for water in these villages. Statement is laid on the table.

(b) The plans and estimates under N.R.W.S. Scheme for Channapatna Village are being prepared. Plans have not been prepared for the remaining villages.

(c) Out of the above six villages, N.R.W.S. Scheme to the Channapatna Village has been sanctioned by the Government during 1981-82. Government has contemplated to implement the said schemes for the remaining villages in a phased manner.

ಶ್ರೀ ಕೆ. ಎಚ್., ಹನುಮೇಗೌಡ.—ಸ್ವಾಮಿ ನನ್ನ ಪ್ರಶ್ನೆಗೆ ಉತ್ತರವಾಗಿ ನಾನು ಕೇಳಿರುವ ೫ ಗ್ರಾಮಗಳಲ್ಲಿಯೂ ಕುಡಿಯುವ ನೀರಿನ ತೊಂದರೆ ಇಲ್ಲ ಎಂದು ಹೇಳಿದ್ದೀರಿ. ಚಿಕ್ಕಬಸವನಹಳ್ಳಿಯಲ್ಲಿ ೫೯೫ ಜನಗಳಿದ್ದಾರೆ. ಒಂದು ಕೊಳವೆ ಬಾವಿಯಲ್ಲಿ ಒಂದು ಗಂಟೆಗೆ ೧೦೦ ಗ್ಯಾಲನ್ ನೀರು ಬರುತ್ತದೆ ಮೆಷಿನ್ ಕೆಡದೆ ೮ ಗಂಟೆಗಳ ಕಾಲ ಚೆನ್ನಾಗಿ ಕೆಲಸ ಮಾಡಿದರೆ ೮೦೦ ಗ್ಯಾಲನ್ ನೀರು ಬರುತ್ತದೆ ೫೯೫ ಜನಸಂಖ್ಯೆ ಇರುವ ಗ್ರಾಮಕ್ಕೆ ೮೦೦ ಗ್ಯಾಲನ್ ನೀರು ಬಂದರೆ ಜನಗಳಿಗೆ ತೊಂದರೆಯಾಗುವುದಿಲ್ಲವೇ?

ಶ್ರೀ ಬಿ. ರಾಮಯ್ಯ.—ಮಾನ್ಯ ಸದಸ್ಯರು ಈ ಪ್ರಶ್ನೆಯನ್ನು ಕೇಳಿರತಕ್ಕದ್ದು ನನಗೆ ಆರ್ಥವಾಯಿತು. ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಯೋಜನೆಗೆ ಇದನ್ನು ಅಳವಡಿಸಿಕೊಂಡು ಅವರು ಪ್ರಶ್ನೆ ಕೇಳುತ್ತಿದ್ದಾರೆ. ಒಂದು ಸಾವಿರಕ್ಕಿಂತ ಜನಸಂಖ್ಯೆ ಕಡಿಮೆ ಇದ್ದರೆ ಅದನ್ನು ನ್ಯಾಷನಲ್ ರೂರಲ್ ವಾಟರ್‌ಸಪ್ಲೈ ಪ್ರೋಗ್ರಾಮ್‌ನಲ್ಲಿ ಕಾರ್ಯಗತ ಮಾಡುವುದಕ್ಕೆ ಬರುವುದಿಲ್ಲ, ಈಗಾಗಲೇ ಆ ಹಳ್ಳಿಯಲ್ಲಿ ಒಂದು ಬಾವಿಯನ್ನು ತೋಡಿಸಿ ಜನಗಳಿಗೆ ಚೆನ್ನಾಗಿ ನೀರು ಕೊಡುತ್ತಿದ್ದೇವೆ. ಈಗ ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗಿದೆ. ಅಲ್ಲಿ ಇನ್ನೊಂದು ಬಾವಿಯನ್ನು ತೆಗೆಸಿಕೊಡುವ ಏರ್ಪಾಡನ್ನು ಮಾಡುತ್ತೇವೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಚಿಕ್ಕಬಸವನಹಳ್ಳಿಯಲ್ಲಿ ಒಂದು ಬೋರ್‌ವೆಲ್ ಇದೆ. ಅದರಲ್ಲಿ ಒಂದು ಗಂಟೆಗೆ ೧೦೦ ಗ್ಯಾಲನ್ ನೀರು ಬರುತ್ತದೆ, ಮೆಷಿನ್ ೮ ಗಂಟೆ ಕೆಲಸ ಮಾಡಿದರೆ ೮೦೦ ಗ್ಯಾಲನ್ ನೀರು ಬರುತ್ತದೆ. ೬೦೦ ಜನ ಪ್ರಜಾಸಂಖ್ಯೆ ಇರುವ ಗ್ರಾಮದಲ್ಲಿ ಒಬ್ಬೊಬ್ಬರಿಗೆ ಎಷ್ಟು ನೀರು ಸಿಗುತ್ತದೆ ಒಂದು ಸಾವಿರ ಪ್ರಜಾಸಂಖ್ಯೆಗಿಂತ ಕಡಿಮೆ ಇದ್ದು ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಪ್ರೋಗ್ರಾಮ್‌ನಲ್ಲಿ ಆ ಗ್ರಾಮಕ್ಕೆ ನೀರು ಸರಬರಾಜು ಮಾಡುವುದಕ್ಕೆ ಆಗುವುದಿಲ್ಲ ಎಂದರೆ ಏನರ್ಥ? ಬೆಂಗಳೂರು ನಗರದಲ್ಲಿ ಒಬ್ಬ ಮನುಷ್ಯನಿಗೆ ಎಷ್ಟು ಗ್ಯಾಲನ್ ನೀರು ಕೊಡುತ್ತಿದ್ದೀರಿ. ಆ ನೀರಿನಲ್ಲಿ ಒಂದು ಗ್ಯಾಲನ್ ನೀರು ಒಬ್ಬ ಮನುಷ್ಯನಿಗೆ ಕೊಡುವುದು ಸಾಕಾಗುತ್ತದೆಯೇ? ಇವರನ್ನು ಕೇಳುವವರು ಹೇಳುವವರು ಯಾರು ಇಲ್ಲವೇ?

ಅಧ್ಯಕ್ಷರು.—ಮಾನ್ಯ ಸದಸ್ಯರು ಅದನ್ನು ನೋಡಿಕೊಳ್ಳುವುದಕ್ಕೆ ಇದ್ದಾರಲ್ಲ. ಹೇಳುವವರು ಕೇಳುವವರು ಇಲ್ಲ ಎಂದರೆ ಏನರ್ಥ.

ಶ್ರೀ ಬಿ. ರಾಮಯ್ಯ.—ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗಿದೆ. ಆ ಊರಿನಲ್ಲಿ ತಕ್ಷಣ ಇನ್ನೊಂದು ಬಾವಿಯನ್ನು ತೆಗೆಸಿಕೊಡುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಉದ್ದೂರ್ ಗ್ರಾಮದಲ್ಲಿ ನೀರಿಗೆ ಬಹಳ ತೊಂದರೆ ಇದೆ. ಆ ಊರಿನಲ್ಲಿ ತೋಡಿದ ಕೊಳವೆ ಬಾವಿಯಲ್ಲಿ ಸಾಕಷ್ಟು ನೀರು ಬರದ ಕಾರಣ ಮೂರನೆಯ ಕೊಳವೆ ಬಾವಿಯನ್ನು ತೋಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ, ಆ ಊರಿನ ಬಾವಿಯಲ್ಲಿ ನೀರು ಬಾರದೆ ಇರುವುದು ಸರ್ಕಾರದ ಗಮನಕ್ಕೆ ಬಂದು ೯ ತಿಂಗಳಾದರೂ ಕೂಡ ಅಲ್ಲಿ ಇನ್ನೊಂದು ಬಾವಿಯನ್ನು ತೆಗೆಸುವುದಕ್ಕೆ ಕ್ರಮ ತೆಗೆದುಕೊಳ್ಳದೆ ಇರುವುದಕ್ಕೆ ಕಾರಣವೇನು

ಶ್ರೀ ಬಿ. ರಾಮಯ್ಯ.—ಮಾನ್ಯ ಅಧ್ಯಕ್ಷರೇ, ಅಲ್ಲಿ ನಾವು ಒಂದು ಸಾರಿ ಎರಡು ಪಾಯಿಂಟನ್ನು ತೆಗೆಯಲಿಕ್ಕೆ ಅವರಿಗೆ ಅಧಿಕಾರ ಕೊಟ್ಟಿರುತ್ತೇವೆ. ಒಂದನ್ನು ತೆಗೆದಿದ್ದಾರೆ, ಆದರಲ್ಲಿ ಹೂಳು ಬಂದಿದೆ ಎಂದು ಹೇಳಿದ್ದಾರೆ. ಇನ್ನೊಂದು ತೆಗೆಯಿರಿ ಎಂದು ಹೇಳಿದ್ದೇವೆ. ಕೆಲವು ಸಂದರ್ಭಗಳಲ್ಲಿ ಏನಾಗುತ್ತದೆ ಎಂದು ಮಾನ್ಯ ಸದಸ್ಯರಿಗೆ ಗೊತ್ತಿದೆ, ಅವರೂ ಚರ್ಚೆಮಾಡಿದ್ದಾರೆ. ಕೆಲವು ಭಾಗದಲ್ಲಿ ಅಂದರೆ ಹಾಸನ ಜಿಲ್ಲೆ ನಮ್ಮ ರಾಜ್ಯದಲ್ಲೇ ಉತ್ತಮವಾಗಿ ಬೋರ್‌ವೆಲ್ಸ್ ಸಕ್ಸಸ್ ಆಗತಕ್ಕ ಜಿಲ್ಲೆ. ಕೆಲವು ಭಾಗದಲ್ಲಿ ಮಾತ್ರ ಹೂಳು ಬರುತ್ತಾ ಇದೆ. ಕೆಲವು ಕಡೆ ಸರಿಯಾಗಿ ಬರುತ್ತಾ ಇಲ್ಲ. ಮತ್ತೊಂದು ಕಡೆ ಪ್ರಯತ್ನ ಪಡುತ್ತಿದ್ದಾರೆ. ಆದಷ್ಟು ಶೀಘ್ರವಾಗಿ ಏನಿದೆ ಅದನ್ನು ತಿಳಿಸಿ, ನಿಮ್ಮ ಕೆಲಸ ನಾನು ಮಾಡಿಸಿ ಕೊಡುತ್ತೇನೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಉತ್ತೂರು ಮತ್ತು ದೊಡ್ಡ ಕೊಂಡಗಳ ಗ್ರಾಮಗಳಲ್ಲಿ ಎರಡು ಬೋರ್‌ವೆಲ್‌ಗಳನ್ನು ಹಾಕಿದ್ದೀರಿ. ನೀರು ಸಾಕಷ್ಟು ಬಂದಿದ್ದರೂ ಕೂಡ ಅದು ಬ್ಲಾಕಿಷ್

ವಾಟರ್. ಆ ನೀರನ್ನು ಯಾರೂ ಉಪಯೋಗಿಸುವುದಿಲ್ಲ. ನಾನು ಟೆಸ್ಟ್ ಮಾಡಿ ನೋಡಿದ್ದೇನೆ. ಆ ನೀರನ್ನು ಕುಡಿಯುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆ. ಆದುದರಿಂದ ಇದಕ್ಕೆ ಬೇರೆ ಆಲ್ಟರ್ನೇಟೀವ್ ನೀರಿನ ವ್ಯವಸ್ಥೆ ಮಾಡಬೇಕಲ್ಲ. ಹಳ್ಳಿಯ ಜನ ಅರ್ಧ ಮೈಲಿಯಿಂದ ನೀರನ್ನು ತೆಗೆದು ಕೊಂಡು ಬಂದು ಕುಡಿಯುತ್ತಿದ್ದಾರೆ. ಈಗ ಆಗಿರತಕ್ಕ ಬೋರ್‌ವೆಲ್‌ನಲ್ಲಿ ಬ್ಲಾಕಿಷ್ ವಾಟರ್ ಇದೆ, ಅದು ಉಪಯೋಗಕ್ಕೆ ಬರುವುದಿಲ್ಲ. ಆ ಊರಿನಲ್ಲಿ ಒಂದು ಸಾವಿರಕ್ಕೆ ಮೇಲ್ಪಟ್ಟು ಜನಸಂಖ್ಯೆ ಇದೆ. ಕೊನೇಪಕ್ಷ ಒಂದು ಸಾವಿರಕ್ಕೆ ಮೇಲ್ಪಟ್ಟು ಜನಸಂಖ್ಯೆ ಇರತಕ್ಕಂಥ ಗ್ರಾಮಗಳಿಗೆ ಎನ್.ಆರ್.ಡಬ್ಲ್ಯು ಸ್ಕೀಂನಿಂದ ಮಂಜೂರು ಮಾಡಿಕೊಡುತ್ತೇವೆಂದು ಹೇಳುತ್ತೀರಾ ಎರಡು ವರ್ಷಗಳ ಹಿಂದೆ ನಾಲ್ಕೈದು ಗ್ರಾಮಗಳಿಗೆ ಎನ್.ಆರ್.ಡಬ್ಲ್ಯು ಸ್ಕೀಂನಿಂದ ಮಾಡಿಸಿಕೊಡುತ್ತೇವೆಂದು ಹೇಳಿದ್ದೀರಿ. ಕೊನೇಪಕ್ಷ ಈ ವರ್ಷವಾದರೂ ಸೇರಿಸಿ ಸ್ಯಾಂಕ್ಷನ್ ಮಾಡಿಸಿಕೊಡುತ್ತೀರಾ

ಶ್ರೀ ಬಿ. ರಾಮಯ್ಯ.—ಕೊನೆಗೆ ಬಂತು ಉತ್ತರ. ಏನೆಂದರೆ, ಮಾನ್ಯ ಹನುಮೇಗೌಡರಿಗೆ ಹೋದ ವರ್ಷದಿಂದ ಸಾಕಷ್ಟು ನಾವು ಕೊಟ್ಟಿದ್ದೇವೆ. ಐದಾರು ಯೋಜನೆಗಳನ್ನು ಮಾನ್ಯ ಹನುಮೇಗೌಡರಿಗೆ ಕೊಟ್ಟಿದ್ದು, ೩೧-೩-೧೯೮೨ರಲ್ಲಿ ಸಪ್ಲಿಮೆಂಟರಿ ಲಿಸ್ಟ್‌ನಲ್ಲಿ, ಈ ಯೋಜನೆಯಲ್ಲಿ ಕೊಟ್ಟಿದ್ದೇವೆ ಈಗ ಉತ್ತೂರು ಮತ್ತು ದೊಡ್ಡ ಕೊಂಡಗಳ ಇವೆರಡನ್ನೂ ಎನ್.ಆರ್.ಡಬ್ಲ್ಯು ಸ್ಕೀಮಿಗೆ ಸೇರಿಸಬೇಕು ಎಂದು ಹೇಳಿದ್ದಾರೆ. ನಾವು ಡಿ.ಡಿ ಸಿ. ರಿಪೋರ್ಟ್ ತರಿಸಿ ಮಾಡಬೇಕಾಗುತ್ತದೆ, ಕಟ್ಟಾಯ, ಉತ್ತೂರು ಮತ್ತು ದೊಡ್ಡಕೊಂಡಗಳ ಗ್ರಾಮಗಳನ್ನು ಸೇರಿಸಬೇಕು ಎಂದು ಹೇಳಿದ್ದಾರೆ, ಇದನ್ನು ಡಿ.ಡಿ.ಸಿ. ಯವರು ರೆಕಮೆಂಡ್ ಮಾಡಿ ಕಳಿಸುತ್ತಾರೆ. ನಾವು ೧೯೮೨-೮೩ ರಲ್ಲಿ ತೆಗೆದುಕೊಳ್ಳುವಾಗ ಡಿ.ಡಿ.ಸಿ. ರೆಕಮೆಂಡೇಷನ್ ಆಧಾರವಾಗಿಟ್ಟು ಕೊಂಡೇ ಮಾಡತಕ್ಕಂಥಾದ್ದು. ಇದನ್ನು ತೀವ್ರವಾಗಿ: ಖಂಡಿತವಾಗಿ ಪರಿಶೀಲನೆ ಮಾಡಿಕೊಡುತ್ತೇನೆ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.

QUESTIONS FOR ANSWERS ON THE DAY

(but not taken up)

Disturbances in a Public Meeting at Belgaum

522 P.A. PAWASHE(Uchagaon).—Will the Chief Minister be pleased to state.—

(a) whether the Mahirashtra Ekikaran Samiti had arranged a cycle procession with black flags in the morning and have organised a public meeting in the evening on the Ist November 1981 to observe Black Day at Belgaum:

(b) whether it is not fact that the procession and meeting were peaceful;

(c) whether there was any occasion for the police to lathi-charge on the Marathi speaking people who had participated in the procession and as well as in the public meeting?

SRI R. GUNDU RAO (Chief Minister). —

(a) Yes.

(b) Some mischievous elements in the procession indulged in stone pelting and causing damage to public and Government property. The public meeting in the evening went on undisturbed.